ವಿಚಾರ ಲಹರಿ

# ಜಗದ ಜಲಗಾರ

ಸಾರ್ವಜನಿಕ ಸ್ಥಳಗಳಲ್ಲಿ ಶೇಖರವಾಗುವ ಕಸ ಕೊಳೆಗಳನ್ನು ಗುಡಿಸಿ, ಪರಿಸರವನ್ನು ಶುಚಿಯಾಗಿರಿಸುವ ಕಾಯಕ ಜಲಗಾರ ಅಥವಾ ಜಾಡಮಾಲಿಯದು. ಜಲಗಾರನದು ನಿತ್ಯಕಾಯಕ. ಒಂದೇ ಒಂದು ದಿನ ಆತ ತನ್ನ ಕೆಲಸವನ್ನು ನಿಲ್ಲಿಸಿದರೂ ಪರಿಸರ ಕಲುಷಿತಗೊಳ್ಳುತ್ತದೆ; ಅನಾರೋಗ್ಯ ಕಾಣಿಸಿಕೊಳ್ಳಲು ಕಾರಣವಾಗುತ್ತದೆ. ಹೀಗೆ ಬಾಹ್ಯ ಪರಿಸರದ ನೈರ್ಮಲ್ಯದಷ್ಟೇ, ಸಮುದಾಯದ ಹಾಗೂ ಅದರಲ್ಲಿನ ವ್ಯಕ್ತಿಗಳ ಅಂತರಂಗದ ನೈರ್ಮಲ್ಯವೂ ಮುಖ್ಯ ವೆಂಬುದನ್ನು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಸಮುದಾಯದ ಅಂತರಂಗದಲ್ಲಿ ಒಟ್ಟು ಗೂಡಿದ ಕಸ ಕೊಳೆಯನ್ನು ಗುಡಿಸಿ, ಸ್ವಚ್ಛಗೊಳಿಸುವ ಮಹನೀಯರನ್ನು ನಾವು ಜಗತ್ತಿನ ಇತಿಹಾಸದುದ್ದಕ್ಕೂ ಕಾಣುತ್ತೇವೆ. ಅಂಥವರನ್ನು 'ಜಗದ ಜಲಗಾರರು' ಎನ್ನಬಹುದು. ಕರ್ನಾಟಕದಲ್ಲಿ ಹನ್ನೆರಡನೆಯ ಶತಮಾನದಲ್ಲಿದ್ದ ಬಸವಣ್ಣನವರು ಈ ಗುಂಪಿಗೆ ಸೇರಿದವರು.

ಬಸವಣ್ಣನವರು ಮೂಲತಃ ಸಮಾಜ ಮುಖಿ, ಸಮಾಜದ ಮನಸ್ಸಿನಲ್ಲಿ ಶೇಖರವಾಗಿದ್ದ ಮೌಢ್ಯ, ಕಂದಾಚಾರ, ಅಜ್ಞಾನ, ತರತಮಭಾವ– ಇತ್ಯಾದಿ ಕಲ್ಮಷಗಳನ್ನು ತೊಳೆಯುವುದಕ್ಕಾಗಿ ತಮ್ಮದೇ ಆದ ಕ್ರಾಂತಿಯ ಹಾದಿಯನ್ನು ಆಯ್ಕೆ ಮಾಡಿಕೊಂಡ ಅವರು ಸಹಜವಾಗಿಯೇ ಯಥಾಸ್ಥಿತಿ ವಾದಿಗಳ ಆಕ್ರೋಶವನ್ನು ಅನುಭವಿಸಬೇಕಾಯಿತು. ಧರ್ಮವೆಂಬ ವ್ಯಾಪಕ ಪರಿಕಲ್ಪನೆ ಜಾತಿ, ಉಪಜಾತಿಗಳಲ್ಲಿ, ಡಾಂಭಿಕ ಆಚರಣೆಗಳಲ್ಲಿ ಸಂಕುಚಿತಗೊಂಡು ನಾರತೊಡಗಿದಾಗ, ಧರ್ಮಕ್ಕೆ 'ಮಾನವಧರ್ಮ'ವೆಂಬ ವಿಶಾಲಾರ್ಥವನ್ನು ಕೊಟ್ಟು, ಜನರನ್ನು ಅರಿವಿನ ಕಡೆಗೆ ಹೊರಳಿಕೊಳ್ಳುವಂತೆ ಮಾಡಲು ಪ್ರಯತ್ನಿಸಿದವರು ಬಸವಣ್ಣನವರು. ಶ್ರೇಷ್ಠತೆ ಎಂಬುದು ಮನುಷ್ಯನಿಗೆ ಹುಟ್ಟಿದ ಜಾತಿಯಾಗಿ ಬರುವಂಥದಲ್ಲ, ಅದನ್ನು ಆತ ತನ್ನ ಬದುಕಿನ ರೀತಿಯಿಂದ ಗಳಿಸಿಕೊಳ್ಳಬೇಕು– ಎಂಬುದನ್ನು ಸಾರಿದ ಅವರು ಜಾತಿಯ ಮಾನದಂಡದಿಂದ ಶ್ರೇಷ್ಠತೆ ನಿಕೃಷ್ಟತೆಗಳನ್ನು ಆರೋಪಿಸುವ ಸಂಪ್ರದಾಯವನ್ನು ಖಂಡಿಸಿದರು. 'ಕೊಲುವವನೇ ಮಾದಿಗ, ಹೊಲಸು ತಿನ್ನುವವನೇ ಹೊಲೆಯ', 'ಆಚಾರವೇ ಸ್ವರ್ಗ, ಅನಾಚಾರವೇ ನರಕ', 'ಹುಸಿ ಎಂಬುದೇ ಹೊಲೆ' –ಇಂಥ ಮಾತುಗಳು ವ್ಯಕ್ತಿಯ ಶೀಲದಿಂದಲೇ ಆತನ ಯೋಗ್ಯತೆಯನ್ನು ಅಳೆಯಬೇಕೆಂಬುದನ್ನು ಸ್ಪಷ್ಟವಾಗಿ ಸೂಚಿಸುತ್ತವೆ. 'ಕಳಬೇಡ, ಕೊಲಬೇಡ; ಹುಸಿಯ ನುಡಿಯಲು ಬೇಡ...' ಎಂದು ಪ್ರಾರಂಭವಾಗುವ ಪ್ರಸಿದ್ಧ ವಚನ ಭಗವಂತನನ್ನು ಒಲಿಸಿಕೊಳ್ಳಲು ಅಂತರಂಗ ಶುದ್ಧಿಯೊಂದೇ ಸೂಕ್ತಮಾರ್ಗವೆಂದು ನಿರ್ದೇಶಿಸುತ್ತದೆ.

ಬಸವಣ್ಣನವರು ಸರ್ವಸಂಗ ಪರಿತ್ಯಾಗಿಯಾದ ಸಂನ್ಯಾಸಿಯಾಗಿರಲಿಲ್ಲ. ಗೃಹಸ್ಥರಾಗಿದ್ದ ಅವರು ಇಹದ ಪರಿಮಳದ ಹಾದಿಯಲ್ಲೇ ನಡೆದು, ಆಧ್ಯಾತ್ಮಿಕ ಶಿಖರವನ್ನೇರಿದವರು; ಪ್ರಾಪಂಚಿಕ ಅನುಭವಗಳ ಮೂಲಕವೇ 'ಮಹಾನುಭಾವಿ'ಗಳಾದವರು. ಬಿಜ್ಜಳನ ಆಸ್ಥಾನದಲ್ಲಿ ಕೋಶಾಧಿಕಾರಿಯಾಗಿ ವ್ಯಾವಹಾರಿಕ ಚಟುವಟಿಕೆಗಳನ್ನು ನಿರ್ವಹಿಸುತ್ತಲೇ 'ಭಕ್ತಿ ಭಂಡಾರಿ'ಯಾಗಿ ಹೊರಹೊಮ್ಮಿದವರು. ಸಾಧನೆಯ ಮಾರ್ಗದಲ್ಲಿ ವೃತ್ತಿ, ಜಾತಿ, ವಯಸ್ಸು, ಲಿಂಗ–ಯಾವುದೂ ಅಡಚಣೆಯಲ್ಲ, ನೈತಿಕ ಬಲವೇ ಎಲ್ಲ ಸಾಧನೆಗೂ ಮೂಲಾಧಾರ– ಎಂಬುದು ಅವರು ಸಾರಿದ ಸತ್ಯ. 'ಅರಿದರೆ ಶರಣ, ಮರೆದರೆ ಮಾನವ' ಎಂಬುದು ಅವರ ಒಂದು ಪ್ರಸಿದ್ಧ ಹೇಳಿಕೆ, ತನ್ನಲ್ಲಿನ ಲೋಪದೋಷಗಳನ್ನು ಅರಿಯದೆ, ತಾನು ಮಾಡಬೇಕಾದ ಕರ್ತವ್ಯಗಳನ್ನು ಮರೆಯುವಾತ ಸಾಮಾನ್ಯ ಮನುಷ್ಯನಾದರೆ, ಅರಿವಿನ ಬೆಳಕಿನಲ್ಲಿ ಮೇಲೇರುವಾತ ಶರಣನಾಗುತ್ತಾನೆ ಎಂಬುದು ಇದರ ಅರ್ಥ. ಅಂಥ ಶರಣ ಯಾವ ಜಾತಿಯಲ್ಲಿ ಹುಟ್ಟಿದ್ದರೂ ಶ್ರೇಷ್ಠನೇ. 'ನಮ್ಮ ಕೂಡಲ ಸಂಗನ ಶರಣರೆಲ್ಲಾ ಕುಲಜರು' ಎಂದು ಘೋಷಿಸಿದ ಬಸವಣ್ಣನವರು ಹುಟ್ಟಿನಿಂದ ಅಸ್ಪೃಶ್ಯರಾಗಿದ್ದ ಹರಳಯ್ಯ, ಡೋಹರ ಕಕ್ಕಯ್ಯ ಮುಂತಾದವರನ್ನು ಶರಣರನ್ನಾಗಿಸಿದರು; ಅನುಭಾವಿಗಳನ್ನಾಗಿ ಪರಿವರ್ತಿಸಿದರು.

ಬಸವಣ್ಣನವರ ವ್ಯಕ್ತಿತ್ವ ಬಹುಮುಖಿಯಾದುದು. ಅವರು ಸಮಾಜ ಸುಧಾರಕರಾಗಿ, ವ್ಯಕ್ತಿ ವ್ಯಕ್ತಿಗಳ ನಡುವಣ ಮೇಲು ಕೀಳು ಭಾವನೆಯನ್ನು ತೊಲಗಿಸಲು ಹೋರಾಡಿದರು. ಕುಲೀನ, ಕುಲಹೀನ ವೆನ್ನಿಸಿಕೊಂಡ ಕುಟುಂಬಗಳ ನಡುವೆ ವೈವಾಹಿಕ ಸಂಬಂಧವನ್ನೇರ್ಪಡಿಸಿದರು. ಗುಡಿಯಲ್ಲಿ ಮಾತ್ರ ಪೂಜಿಸಲ್ಪಡುತ್ತಿದ್ದ ಶಿವನನ್ನು ಶರಣನ 'ಇಷ್ಟ ಲಿಂಗ'ವನ್ನಾಗಿ ಪರಿವರ್ತಿಸಿ, ಹಸ್ತ ಪೀಠದಲ್ಲಿಟ್ಟು ಪೂಜಿಸುವ ಪ್ರಕ್ರಿಯೆಯನ್ನು ಪ್ರೋತ್ಸಾಹಿಸಿದರು; 'ಮೃದುವಚನವೇ ಸಕಲ ಜಪಂಗಳಯ್ಯ...' ಎಂದು ಹೇಳಿ, ವ್ಯಕ್ತಿ ವ್ಯಕ್ತಿಗಳ ನಡುವಣ ಸೌಹಾರ್ದ ಸಂಬಂಧ ಅವರಾಡುವ ಮಾತುಗಳ ಮೂಲಕವೇ ಗಟ್ಟಿಯಾಗುತ್ತದೆ ಎಂಬ ವಿವೇಕವನ್ನು ಬೋಧಿಸಿದರು. ಕಾಯಕದ ಮೂಲಕವೇ ಕೈಲಾಸವನ್ನು ಸಾಧಿಸಬಹುದು ಎಂದ ಅವರು ಕಾಯಕ ತತ್ತ್ವವನ್ನು ಎತ್ತರಕ್ಕೆ ಕೊಂಡೊಯ್ದರು. 'ಮರ್ತ್ಯ ಲೋಕವೆಂಬುದು ಕರ್ತಾರನ ಕಮ್ಮಟ'ವೆಂದು ಸಾರಿ, ಈ ಲೋಕದಲ್ಲಿ ಬದುಕುವ ರೀತಿಯಿಂದಲೇ ಪರಲೋಕದ ಸದ್ಗತಿ ದುರ್ಗತಿಗಳ ನಿರ್ಧಾರವಾಗುತ್ತದೆ ಎಂದು ತಿಳಿಹೇಳಿದರು. ವಚನಕಾರರಾಗಿ ಅಭಿವ್ಯಕ್ತಿಯಲ್ಲೂ ಕ್ರಾಂತಿಯುಂಟು ಮಾಡಿದರು. 'ಸ್ಥಾವರಕ್ಕಳಿವುಂಟು, ಜಂಗಮಕ್ಕಳಿವಿಲ್ಲ' ಎಂದು ಬಸವಣ್ಣನವರು ಎಚ್ಚರಿಸಿದ್ದರೂ ಧರ್ಮವೆಂಬುದು ಸ್ಥಾವರಗೊಂಡು, ಚಲನಶೀಲತೆಯನ್ನು ಕಳೆದುಕೊಂಡಿರುವ ಕಾಲ ಘಟ್ಟಕ್ಕೆ ನಾವು ಬಂದಿದ್ದೇವೆ. ಬಸವಣ್ಣನಂಥ ಇನ್ನೊಬ್ಬ ಜಲಗಾರ ಕಾಣಿಸಿಕೊಳ್ಳಬೇಕಾಗಿದೆ!

–ವೈನತೇಯ

## ಮಾತೇ ಮುತ್ತು

★ ಅಂತಃಕರಣ ಹಾಗೂ ಸರಳ ನೇರ ನಡೆ ನುಡಿಯೇ ಎಲ್ಲಕ್ಕಿಂತ ದೊಡ್ಡ ಗುಣ.

–ಅನುಭವಾಮೃತ

★ ಸುಳ್ಳುಗಾರನ ಅತಿ ಸಮೀಪದ ಸ್ನೇಹಿತ 'ಭೀತಿ.' ಸತ್ಯವಂತನ ಅತಿ ಸಮೀಪದ ಸ್ನೇಹಿತ 'ನಿರ್ಭೀತಿ.'

–ಜವಾಹರಲಾಲ್ ನೆಹರೂ

★ ಕಾದಂಬರಿ ಕರತಲ ರಂಗಭೂಮಿ, ಅಂಗೈ ಮೇಲಣ ನಾಟಕ ಶಾಲೆ.

–ಕುವೆಂಪು

★ ಅನ್ಯಾಯವನ್ನು ಸಹಿಸುವುದಕ್ಕಿಂತ ಅನ್ಯಾಯವನ್ನು ಮಾಡುವುದು ಒಳ್ಳೆಯದು! ಆದರೆ ಯಾರೂ ಈ ಸಿದ್ಧಾಂತವನ್ನು ಒಪ್ಪುವುದಿಲ್ಲ.

–ಚರ್ಚಿಲ್

★ ಅರ್ಥವು ಮಾತಿನಲ್ಲಿ ಇದೆ. ಅರ್ಥಕ್ಕೆ ಮಾತು ಮೂಲ. ಅರ್ಥವು ಮಾತಿನೊಡನೆ ಬೆರೆತಿದೆ. ಯಾರು ಆ ಮಾತನ್ನು ಸುಳ್ಳಾದ ಅರ್ಥ ಕೊಡುವಂತೆ ಆಡುತ್ತಾನೆಯೋ ಅವನು ಎಲ್ಲ ರೀತಿಯ ಕಳ್ಳತನವನ್ನೂ ಮಾಡಿದಹಾಗೆ ಆಗುತ್ತದೆ.

–ನಾರದ ಸ್ಮೃತಿ

★ ನಿಜವಾದ ಪ್ರೀತಿ ಸಂಯೋಗದಲ್ಲೂ, ವಿಯೋಗದ ಮಧುರ ವೇದನೆಯನ್ನು ಅನುಭವಿಸುತ್ತದೆ.

–ಕೀಟ್ಸ್

★ ಚಿಂತೆಯೊಂದನ್ನು ಹೊರತುಪಡಿಸಿದರೆ, 'ಅಸೂಯೆ' ಮನುಷ್ಯನ ಪ್ರಬಲ ಶತ್ರು.

–ಬರ್ಟ್ರಾಂಡ್ ರಸೆಲ್

★ ನಮ್ಮ ನಾಡಿನವರೀಗ ತಮ್ಮನ್ನು ತಾವು ಎಷ್ಟು ಮರೆತುಕೊಂಡರೆ ಅಷ್ಟು ತಾವು ಮುಂದುವರಿದವರು ಎಂಬ ಭಾವವನ್ನು ತಳೆದಿರುವಂತೆ ತೋರುತ್ತದೆ. ಅವರಿಗೆ ತಾವು ರಾಮಾಯಣ, ಮಹಾಭಾರತದಂತಹ ಮಹಾಸಂಸ್ಕೃತಿಗೆ ಸೇರಿದವರೆಂಬ ಸ್ಮರಣೆ ಬೇಡದಂತಿದೆ.

–ಪು.ತಿ.ನರಸಿಂಹಾಚಾರ್

★ ನೀನೇ ಭಗವಂತನ ದೇವಾಲಯ. ಭಗವಂತ ನಿನ್ನಲ್ಲಿಯೇ ಇದ್ದಾನೆ ಎನ್ನುವುದು ನಿನಗೆ ತಿಳಿಯದೇ?

–ಬೈಬಲ್

★ ಅದೇತಾನೆ ಮದುವೆ ಆದ ಹೆಣ್ಣನ್ನು ನಿರ್ಲಕ್ಷಿಸಿದರೆ, ಬಾಯಿ ತೆರೆದು ಕುಳಿತ ಜಾತಕ ಪಕ್ಷಿಗೆ ಬರಸಿಡಿಲು ಎರಗಿದಂತೆ.

–ಸಂಚಿ ಹೊನ್ನಮ್ಮ